# 'ಸುಧಾ' ಜೊತೆಗಿನ ಓದುಗರ ಒಡನಾಟ

## ಎಲ್ಲರನ್ನೂ ಒಳಗೊಂಡ 'ಸುಧಾ'

1976ರಲ್ಲಿ 'ಸುಧಾ' ಓದಲು ಆರಂಭಿಸಿದೆ. ಪತ್ರಿಕೆ ಕೊಂಡು ಓದುವ ಆರ್ಥಿಕ ಶಕ್ತಿ ನಮ್ಮಲ್ಲಿರಲಿಲ್ಲದ ಕಾರಣ ಗ್ರಂಥಾಲಯಕ್ಕೆ ಹೋಗಿ ಓದುತ್ತಿದ್ದೆ. ಕಾಲೇಜಿನ ರಜಾದಿನಗಳಲ್ಲಿ ಬಾವನ ಮನೆಗೆ ಹೋಗುತ್ತಿದ್ದೆ. ನನ್ನ ಬಾವ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದರು. ಅವರು ಸಾಹಿತ್ಯಪ್ರಿಯರಾದ್ದರಿಂದ ತಪ್ಪದೇ 'ಸುಧಾ' ತರಿಸುತ್ತಿದ್ದರು. ಹೀಗೆ ಪತ್ರಿಕೆ ಓದುತ್ತಾ ನನಗೊಂದು ಪ್ರಶ್ನೆ ತೋಚಿತು. ಅದನ್ನು 'ನೀವು ಕೇಳಿದಿರಿ' ವಿಭಾಗಕ್ಕೆ ಬರೆದೆ. ನಾನು ಬರೆದ ಪ್ರಥಮ ಪ್ರಶ್ನೆಗೆ ಬಹುಮಾನವೂ ಬಂತು.

ಈಗ ನನ್ನ 'ಸುಧಾ' ಓದಿಗೆ 48 ವರ್ಷಗಳು. ಯಾವುದೇ ಒಂದು ಪ್ರದೇಶದ, ಅಭಿರುಚಿಯ, ವಯೋಮಾನದ ಓದುಗರ ಬರಹಗಾರರಿಗೆ ಸೀಮಿತವಾಗಿಲ್ಲದೆ ಎಲ್ಲರನ್ನೂ ಒಳಗೊಂಡದ್ದು 'ಸುಧಾ' ಎಂಬುದು ನನ್ನ ಅನುಭವದ ಮಾತು. 'ಸುಧಾ' ಇನ್ನು ಮುಂದೆಯೂ ಹೀಗೆಯೇ ಜ್ಞಾನಸುಧೆ ಹರಿಸುತಿರಲಿ... ಪ್ರತಿವಾರ ಹೊಸ ಹೊಸ ವೈಜ್ಞಾನಿಕ, ವೈಚಾರಿಕ, ಸಾಮಾಜಿಕ ಹಾಸ್ಯಭರಿತ ವೈವಿಧ್ಯಪೂರ್ಣ ಲೇಖನಗಳನ್ನು ಹೊತ್ತು ತರುವ 'ಸುಧಾ' ಚಿರಕಾಲ ಬಾಳಲಿ.

—ಮಹಾವೀರ ಕಾಸರ, ಶಿವಮೊಗ್ಗ

## ಒದುಗರ ನೆಚ್ಚಿನ ಪತ್ರಿಕೆ

1967ರಿಂದಲೂ 'ಸುಧಾ' ಓದುತ್ತಿದ್ದೇನೆ. ಅಂದು ಕನ್ನಡ ನಾಡಿನ ಅಚ್ಚುಮೆಚ್ಚಿನ ವಾರಪತ್ರಿಕೆ ಎಂದು ಕರೆಸಿಕೊಂಡಿದ್ದ 'ಸುಧಾ', ಇಂದಿಗೂ ಓದುಗರನ್ನು ಸೆಳೆಯುತ್ತಲೇ ಇದೆ. ಕ್ರೀಡಾಲೋಕ, ಧಾರಾವಾಹಿ, ಜ್ಞಾಪಕ ಚಿತ್ರಶಾಲೆ ನನ್ನ ನೆಚ್ಚಿನ ಕಾಲಂಗಳು. 'ನೀವು ಕೇಳಿದಿರಿ'ಗೆ ಪ್ರಶ್ನೆಗಳನ್ನು ಕೇಳುತ್ತಿರುತ್ತೇನೆ.

—ದಿನೇಶ್ ಗುಡ್ಡದೂರು, ಚಿಕ್ಕಮಗಳೂರು

## ಪಾಕಸಂಗಮಕ್ಕೆ ಪ್ರೇರಣೆ

'ಸುಧಾ' ಅನೇಕ ವಿಚಾರಗಳ ಕಣಜ. ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಪ್ರಶ್ನೋತ್ತರ, ಸಿನಿಮಾ ಸಂಬಂಧಿತ ಸುದ್ದಿಗಳು, ಧಾರಾವಾಹಿಗಳು, ಆರೋಗ್ಯ ಲೇಖನಗಳು, ವಿಭಿನ್ನ ಅಂಕಣಗಳು ಪ್ರತಿ ಪುಟವೂ ವಿಶಿಷ್ಟ ಎನಿಸುತ್ತವೆ. 'ಸುಧಾ' ಇದೀಗ 60 ವರ್ಷಗಳ ಹೆಮ್ಮರವಾಗಿ ಬೆಳೆದುನಿಂತು ಲಕ್ಷಾಂತರ ಓದುಗರಿಗೆ ಆಪ್ತ ವಾರಪತ್ರಿಕೆಯಾಗಿರುವುದು ಹೆಮ್ಮೆಯ ವಿಚಾರ.

'ಸುಧಾ'ದಲ್ಲಿ ಪ್ರಕಟವಾಗುವ 'ಸವಿರುಚಿ' ನನಗೆ ಅತ್ಯಂತ ಉಪಯುಕ್ತವಾಗುತ್ತಿತ್ತು. ನಾನೂ ಕೊಡಗು ಜಿಲ್ಲೆಯ ಪ್ರಥಮ ಸಸ್ಯಾಹಾರಿ ಅಡುಗೆ ಕೈಪಿಡಿ ಪ್ರಕಟಿಸಲು ಸಹಕಾರಿಯಾಯಿತು. 'ಸುಧಾ'ಳ ಪ್ರೇರಣೆಯಿಂದ ಪಾಕಶಾಸ್ತ್ರದಲ್ಲಿ ವಿಶೇಷ ಆಸಕ್ತಿ ಹೊಂದುವಂತಾಗಿ 'ಪಾಕಸಂಗಮ' ಹೆಸರಿನ ಪುಸ್ತಕ ಪ್ರಕಟಿಸಿದ್ದನ್ನು ಹೆಮ್ಮೆಯಿಂದ ಸ್ಮರಿಸುತ್ತೇನೆ.

ನನ್ನ ಮನೆಯಲ್ಲಿ ಇಂದಿಗೂ ಹಳೆಯ ಮತ್ತು ಈಚಿನ 750ಕ್ಕೂ ಅಧಿಕ 'ಸುಧಾ' ಪತ್ರಿಕೆಗಳಿವೆ.

—ಆಶಾ ತಿಮ್ಮಪ್ಪಯ್ಯ, ಕೊಡಗು

## ಅದೇ ಅಭಿಮಾನ, ಪ್ರೀತಿ

ನನಗೂ, ನನ್ನ ಪ್ರೀತಿಯ 'ಸುಧಾ' ಇಬ್ಬರಿಗೂ 60ರ ಹರೆಯ. ನಾ ಚಿಕ್ಕವಳಿದ್ದಾಗ, ಹಿರಿಯರೆಲ್ಲ ಓದಿದ ನಂತರವೇ ನನ್ನ ಕೈಗೆ ಸಿಗುತ್ತಿದ್ದಳು 'ಸುಧಾ'. ಪುಟ್ಟಪುಟ್ಟ ಕಥೆಗಳು, ಮಕ್ಕಳ ಬರಹಗಳ ಬಹುದೊಡ್ಡ ಫ್ಯಾನ್ ಆಗಿದ್ದೆ ಆಗ. ಅದೇ ಅಭಿಮಾನ ಇಂದಿಗೂ 'ಸುಧಾ'ಳ ಮೇಲಿದೆ. 'ಸುಧಾ' ಅನೇಕಾನೇಕ ವಿಷಯಗಳ ಜ್ಞಾನಭಂಡಾರವೇ ಸರಿ. ನನ್ನ ಪುಟ್ಟ ಮೊಮ್ಮಗನಿಗೆ ಈಗ 'ಎಳೆಯರ ಅಂಗಳ'ದ ಕಥೆ, ಪದ್ಯಗಳನ್ನು ಓದಿ ಹೇಳಲು ಬಲು ಹೆಮ್ಮೆಯೆನಿಸುತ್ತದೆ.

—ಅನುಪಮ ಶ್ರೀನಿವಾಸ ಪ್ರಸಾದ್, ಮೈಸೂರು

## ಹೇಗೆ ಮರೆಯಲಿ ಈ ಬಂಧ?

ನಾನು ಎಂಟನೇ ಕ್ಲಾಸಿನಲ್ಲಿ ಇದ್ದಾಗಲೇ 'ಸುಧಾ' ಮೊದಲ ಸಂಚಿಕೆ ನಮ್ಮ ಮನೆಗೆ ಬಂತು. ಆಗ ಪ್ರಕಟವಾಗುತ್ತಿದ್ದ ಧಾರಾವಾಹಿಗಳು ಓದಿಸಿಕೊಂಡು ಹೋಗುತ್ತಿದ್ದವು. ಪ್ರತಿವಾರ 'ಸುಧಾ' ಬರುವುದನ್ನೇ ಕಾಯುತ್ತಿದ್ದೆ.

ಓದಿನಿಂದ ಬರವಣಿಗೆಯತ್ತ ಮನಸ್ಸು ವಾಲಿತು. 1970ರಲ್ಲಿ 'ಸುಧಾ'ಗೆ ನಾನು ಒಂದು ಚುಟುಕು ಬರೆದು ಕಳಿಸಿದ್ದೆ. ಅದು ಪ್ರಕಟವಾದಾಗ ಖುಷಿಯೋ ಖುಷಿ. 2011ರಲ್ಲಿ ನನ್ನ ಸಣ್ಣ ಕಥೆ 'ಉಪವಾಸ ಸತ್ಯಾಗ್ರಹ' ಪ್ರಕಟವಾಯಿತು. ನನ್ನ ನೆಚ್ಚಿನ ಪತ್ರಿಕೆಯಲ್ಲಿ ನನ್ನ ಕಥೆ ಓದಿ ನನಗಾದ ಸಂತೋಷ ಹೇಳತೀರದು. ಅದರಿಂದ ಬಂದ 300ರೂಪಾಯಿಗಳ ಚೆಕ್ ನನಗೆ ಕೋಟಿ ಸಮಾನವೆನಿಸಿತು. ಮರೆಯಲಿ ಹ್ಯಾಂಗ ಗೆಳತಿ ನನ್ನ–ನಿನ್ನ ಈ ಅವಿನಾಭಾವ ಬಂಧ?

—ಶಾಂತಾ ಪಸ್ತಾಪೂರ

## ಆಸ್ವಾದನೀಯ ಅಂಕಣಗಳ 'ಸುಧಾ'

ಹಿರಿಯರಿಗೆ, ಕಿರಿಯರಿಗೆ, ಜ್ಞಾನದಾಹಿಗಳಿಗೆ, ಮಹಿಳೆಯರಿಗೆ, ಸಿನಿಮಾಪ್ರಿಯರಿಗೆ, ಫ್ಯಾಷನ್‌ಪ್ರಿಯರಿಗೆ, ಸಂಪ್ರದಾಯವಾದಿಗಳಿಗೆ ಸಚೇತನದಾಯಕವಾದ 'ಸುಧಾ'ಳನ್ನು ಎಸ್‌ಎಸ್‌ಎಲ್‌ಸಿ ದಿನಗಳಿಂದಲೇ ಓದಲು ಆರಂಭಿಸಿದೆ.

'ಸುಧಾ' ತನ್ನದೇ ವಿಶೇಷತೆಗಳನ್ನು ಹೊಂದಿರುವ ಪತ್ರಿಕೆ. 1990ರಲ್ಲಿ 25 ವರ್ಷದ 'ಬೆಳ್ಳಿ ಸಂಚಿಕೆ' ಪ್ರಕಟವಾಯಿತು. ಪ್ರತಿ ವರ್ಷ 'ಯುಗಾದಿ ವಿಶೇಷ ಸಂಚಿಕೆ' ಪ್ರಕಟವಾಗುತ್ತದೆ. ಏಪ್ರಿಲ್ ಮೊದಲ ವಾರದ ಹಾಸ್ಯ ಸಂಚಿಕೆಯೂ ವಿಶೇಷವೇ. ಪತ್ರಿಕೆಯಲ್ಲಿ ಪ್ರಕಟವಾದ ಹೆಚ್ಚಿನ ಧಾರಾವಾಹಿಗಳು ಚಲನಚಿತ್ರಗಳಾಗಿವೆ. 1994 ರಿಂದ 1999ರವರೆಗೆ 'ಸಮಕ್ಷಮ'ದಲ್ಲಿ ನಾಡಿನ ಅನೇಕ ಸಾಹಿತಿಗಳ ಅವರ ಹಸ್ತಾಕ್ಷರದೊಂದಿಗೆ




ಪರಿಚಯ ಮೂಡಿಬಂದಿತ್ತು. 2000ರಿಂದ 2002ರವರೆಗೆ 'ಶಕಪುರುಷರು' ಮಾಲಿಕೆಯಲ್ಲಿ ನಾಡಿನ ಸಾಧಕರ ಪರಿಚಯ, 15 ವರ್ಷ ಸತತವಾಗಿ ಪ್ರಕಟವಾದ 'ವಾರದ ವ್ಯಕ್ತಿ', ರಂಗಭೂಮಿ, ಸಿನಿಮಾ ನಟರ ಬದುಕಿನ 'ಬಣ್ಣದ ಬದುಕು', ಮಕ್ಕಳಿಗಾಗಿ ಫ್ಯಾಂಟಮ್, ಡಾಬೂ, ಮಜನೂ ಚಿತ್ರಕಥೆಗಳು, ಸ್ತ್ರೀಯರಿಗೆ ವಿವಿಧ ರಂಗೋಲಿ ಚಿತ್ರಗಳು, ಕಾಮಧೇನು ಅಂಕಣ ಇವೆಲ್ಲ ಅಪಾರ ಜನಮನ್ನಣೆ ಗಳಿಸಿದವು. ಈಗ 'ನಿಮ್ಮ ಪುಟ' ಸಂಗ್ರಹಯೋಗ್ಯ. ಈಗಿನ ಪ್ರತಿ ಅಂಕಣ ಆಸ್ವಾದನೀಯ. ನನ್ನ ಸಂಗ್ರಹದಲ್ಲಿ 'ಸಮಕ್ಷಮ', 'ಶಕಪುರುಷರು', 'ಬೆಳ್ಳಿ ಸಂಚಿಕೆ', 'ನಿಮ್ಮ ಪುಟ'ಗಳು ಸೇರಿಕೊಂಡಿವೆ.

—ಯು.ಎನ್. ಸಂಗನಾಳಮಠ, ದಾವಣಗೆರೆ